ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಮಿತಿ (ಕಾಗದ ಪತ್ರಗಳು)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE 19/3/2020

## ಆರೋಗ್ಯ ವಿವಿಯಲ್ಲಿ ಹಣ ದುರ್ಬಳಕೆ

19/3

ಆರೋಗ್ಯ ವಿವಿಯಲ್ಲಿ ಆಗಿರುವ ಹಣ ದುರ್ಬಳಕೆ ಬಗ್ಗೆ ವಿಧಾನಸಭೆಯ ಕಾಗದ ಪತ್ರಗಳ ಸಮಿತಿ ಆಕ್ಷೇಪ ವ್ಯಕ್ತಪಡಿಸಿದ್ದು, 2015-16ನೇ ಸಾಲಿನಲ್ಲಿ ಬ್ಯಾಂಕ್‌ನಲ್ಲಿಟ್ಟ 20ಕೋಟಿ ರೂ. ನಿಶ್ಚಿತ ಠೇವಣಿಯಲ್ಲಿ ಮೋಸವಾಗಿದೆ ಎಂದು ವರದಿಯಲ್ಲಿ ಹೇಳಲಾ ಗಿದೆ. ಸಾ.ರಾ.ಮಹೇಶ್ ಅಧ್ಯಕ್ಷತೆಯ ಸಮಿತಿ ಮಂಡಿಸಿದ ವರದಿಯಲ್ಲಿ, '10 ಕೋಟಿ ರೂ.ನ್ನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಹಾಗೂ 10 ಕೋಟಿ ರೂ.ನ್ನು ವಿಜಯ ಬ್ಯಾಂಕ್‌ನಲ್ಲಿ ಠೇವಣಿ ಇಡಲಾಗಿದೆ. ಆದರೆ ಬ್ಯಾಂಕ್‌ನವರು ಸುಳ್ಳು ರಶೀದಿ ನೀಡಿರುವ ಬಗ್ಗೆ ವರದಿಯಾಗಿದ್ದು, ಸಿಐಡಿಗೆ ಮಾಹಿತಿ ನೀಡ ಲಾಗಿದೆ' ಎಂದು ಉಲ್ಲೇಖಿಸಲಾಗಿದೆ. 2016-17ನೇ ಸಾಲಿನಲ್ಲಿ 35,33,20,800 ರೂ. ಬಾಕಿ ವಸೂಲಿ ಮೊತ್ತದ ಬಗ್ಗೆ ಆಡಿಟ್ ಆಕ್ಷೇಪಣೆ ಇರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದ್ದು, ಸಮಿತಿಯು ತಾಂತ್ರಿಕ ಹಾಗೂ ಆಡಳಿತಾತ್ಮಕ ಕಾರಣಗಳನ್ನು ಹೇಳದೆ ಬಾಕಿ ವಸೂಲಿ ಮಾಡುವಂತೆ ನಿರ್ದೇಶನ ನೀಡಲಾಗಿದೆ. ವಿವಿಗೆ ಸಂಬಂಧಪಟ್ಟ 146 ಪ್ರಕರಣಗಳ ಪೈಕಿ 102 ಇತ್ಯರ್ಥವಾಗಿದ್ದು, 44 ಪ್ರಕರಣಗಳು ಬಾಕಿ ಇವೆ ಎಂದು ವರದಿ ತಿಳಿಸಿದೆ.